ಗುಣಗಾನ ಮಾಡಿದರು.

'ನಾನೂ ಪದ್ದು ಮನೆಲೇ ಮೂರು ವರ್ಷ ಇದ್ದೆ'

'ಮನೆಗೆ ಹೋದಾಗ ಯಾವತ್ತೂ ಪದ್ದು ಬರಿಗೈಲಿ ಕಳಿಸಿಲ್ಲ'

'ನನ್ನ ಮಕ್ಕಳಂತೂ ಪದ್ದು ಮನೆಲೇ ಬೆಳೆದಿದ್ದು'

'ಕಳೆದ ತಿಂಗಳೂ ಎಷ್ಟು ಚೆನ್ನಾಗಿ ಅಡುಗೆ ಮಾಡಿ ಕೊಟ್ಟಿದ್ದಳು ಗೊತ್ತಾ'

'ಎರಡು ವಾರದ ಹಿಂದೆ ನಾನು ಬಂದಾಗ ಚೆನ್ನಾಗಿಯೇ ಇದ್ದಳು, ಏನಾಯ್ತೋ ಏನೋ ಇದ್ದಕ್ಕಿದ್ದ ಹಾಗೆ'

* * *

ಹಬ್ಬಕ್ಕೆಂದು ಹೊಸ ಸೀರೆ ತಂದಿದ್ದಳು ಜಾನು. ಪದ್ದಮ್ಮ ಕುಸುಮಾ, ಮಕ್ಕಳು ಎಲ್ಲರನ್ನು ಕೂರಿಸಿಕೊಂಡು ಮಾರನೆ ದಿನಕ್ಕೆ ಎಲ್ಲ ಅಣಿ ಮಾಡುತ್ತಿದ್ದರು. ತಾನು ಉಡುವ ಸೀರೆ, ಒಡವೆ ಎಲ್ಲವನ್ನೂ ಕುಸುಮಾಳ ಜೊತೆ ಜೋಡಿಸಿಕೊಳ್ಳಲು ಬೀರು ತೆಗೆದಿದ್ದರು. ಬೀರುವಿನಲ್ಲಿ ಸರ ಕಾಣಿಸಿರಲಿಲ್ಲ. ಒಂದರ್ಧ ಗಂಟೆ ಬೀರುವಿನಲ್ಲಿದ್ದ ಎಲ್ಲ ಬಟ್ಟೆಗಳನ್ನು ಕಿತ್ತು ಎಸೆದು ಇಂಚಿಂಚೂ ಹುಡುಕಿದ್ದರು. ಸಿಟ್ಟಲ್ಲಿ ಮಗಳು, ಮೊಮ್ಮಕ್ಕಳನ್ನೂ ಬಿಡದೇ ಸರ ತೊಗೊಂಡ್ರೇನೋ ಎಂದು ಕೇಳಿದ್ದರು. ಕೊನೆಗೆ ಯಾಕೋ ಅನುಮಾನ ಬಂದು ಜಾನುವಿನ ಬಳಿ ಬಂದು ನಿಮ್ಮ ಮಾವನಿಗೆ ಒಂಚೂರು ಪೋನ್ ಮಾಡ್ಕೊಡಮ್ಮ ಎಂದಿದ್ದರು.

ಆ ಅವಲಕ್ಕಿ ಸರ ಪದ್ದಮ್ಮನ ತಾಯಿಯದ್ದು. ಆಕೆ ತೀರಿ ಹೋದಾಗ ಎಂಟು ಮಕ್ಕಳಿಗೂ ಆಕೆಯ ಚಿನ್ನ ಕೊಟ್ಟಾಗ ಪದ್ದಮ್ಮನ ಪಾಲಿಗೆ ಬಂದಿದ್ದು ಈ ಅವಲಕ್ಕಿ ಸರ. ಶಂಕರಪ್ಪನ ಕಣ್ಣಿಗೆ ಬೀಳದ ಹಾಗೆ ಬಹಳಷ್ಟು ಬಚ್ಚಿಟ್ಟಿದ್ದರು. ಶಂಕರಪ್ಪ, 'ನಾನು ಸ್ವಂತ ಬಿಸಿನೆಸ್ ಮಾಡಬೇಕು ಸರ ಇದ್ರೆ ಕೊಟ್ಟಿರು, ಬಿಡಿಸಿ ಕೊಡ್ತೀನಿ' ಎಂದು ಕೇಳಿದಾಗಲೂ, 'ಇಲ್ಲ, ಜಾನು ಇಸ್ಕೊಂಡಿದಾಳೆ' ಎಂದು ಸುಳ್ಳು ಹೇಳಿ ಹೇಗೋ ಹುಷಾರಾಗಿಟ್ಟಿದ್ದರು. 'ಹಲೋ... ಏನು?'

'ಅವಲಕ್ಕಿ ಸರ ಎಲ್ಲಿ...?'

'ಯಾವ ಅವಲಕ್ಕಿ?'

'ಸುಳ್ಳು ಬೊಗಳಬೇಡ, ಅವಲಕ್ಕಿ ಸರ ಎಲ್ಲಿ ನಂದು?'

'ಹೌದೇ, ನಾನೇ ತೊಗೊಂಡೆ ಏನೀಗ? ಬೇಕಿತ್ತು, ತೊಗೊಂಡೆ..' 'ಬಾಯಿ ಮುಚ್ಕೊಂಡು ತಂದ್ಕೊಟ್ರೆ ಸರಿ ಈಗ, ಇಲ್ಲ ಅಂದ್ರೆ ನಾನು ಸುಮ್ನಿರಲ್ಲ', 'ಒಂದು ತಿಂಗಳಲ್ಲಿ ಬಿಡಿಸಿ ಬಿಸಾಕ್ತೀನಿ, ಅಲ್ಲಿವರೆಗೆ ನಂಗಾಗಲ್ಲ' ...... ಕಾಲ್ ಕಟ್ಟಾಗಿತ್ತು.

ಪದ್ದಮ್ಮ ಕುಸಿದಿದ್ದರು.

ತನ್ನ ಸ್ವಂತದ್ದು, ಮಗಳ ಚಿನ್ನ ಹೋದಾಗಲೂ ಪದ್ದಮ್ಮ ಅತ್ತಿರಲಿಲ್ಲ. ಜಗಳವಾಡಿದ್ದರು. ತಾಯಿಯ ಚಿನ್ನ ಹೋದಾಗ ಬಿಕ್ಕಿ ಬಿಕ್ಕಿ ಅತ್ತಿದ್ದರು. ಹಬ್ಬದ ಕಳೆ ಮಾಯವಾಗಿ ಮನೆಯಲ್ಲಿ ಸೂತಕದ ಕಳೆ ತುಂಬಿತ್ತು. ಊಟ ತಿಂಡಿ ಎಲ್ಲ ಬಿಟ್ಟು ಕೂತಿದ್ದರು. ಕುಸುಮಾ, ಸೂರ್ಯ ಎಂದಿನಂತೆ ಶಂಕರಪ್ಪನನ್ನು ಬೈಯುವುದು, ಆತ ಮೊಂಡಾಗಿ ಉತ್ತರಿಸುವುದು ನಡೆದೇ ಇತ್ತು. ಅಂದು ಊಟ ತಿಂಡಿ ನಿಲ್ಲಿಸಿದ ಪದ್ದಮ್ಮ ಮತ್ತೆ ಮೊದಲಿನ ಹಾಗೆ ಊಟ ತಿಂಡಿ ಮಾಡಲೇ ಇಲ್ಲ. ಮೂರ್ನಾಲ್ಕು ದಿನಗಳಲ್ಲಿ ಜಾನು ಅವಳ ಸೇವಿಂಗ್ಸ್ ಎಲ್ಲ ಒಂದಿಷ್ಟು ತೆಗೆದು ಶಂಕರಪ್ಪನಿಗೆ, 'ಯಾವ ಒಡವೆ ಅಂಗಡಿ?, ತೋರಿಸಿ' ಎಂದು ದಬಾಯಿಸಿ ಒಡವೆ ಬಿಡಿಸಿಕೊಂಡಿದ್ದಳು. ಊಟ ತಿಂಡಿ ಬಿಟ್ಟು ಹಠ ಹಿಡಿದು ಮಲಗಿದ್ದ ಪದ್ದಮ್ಮನಿಗೆ 'ಅಮ್ಮ ನಿಮ್ಮ ಸರನೇ ಬಿಡಿಸಿದೀನಿ, ತೊಗೊಳಿ' ಎಂದು ಕೈಗಿಟ್ಟಾಗ ಅವರ ಕಣ್ಣಲ್ಲಿ ಸಣ್ಣ ಹೊಳಪು ಮೂಡಿತ್ತು, ಆದರೆ ಅವರಿಗೆ ಬಹಳ ಖುಷಿಯಂತೂ ಆಗಿರಲಿಲ್ಲ.

ಅದಾದ ನಂತರದಲ್ಲಿ ಶಂಕರಪ್ಪನನ್ನು ಪಕ್ಕದಲ್ಲೇ ಇರಿ ಎನ್ನುವುದು ಹೆಚ್ಚಾಗಿತ್ತು. ಊಟ ತಿಂಡಿ ಬಿಟ್ಟು ಒಂದೆರಡು ದಿನಕ್ಕೇ ಪದ್ದಮ್ಮನ ಆರೋಗ್ಯ ಇನ್ನಷ್ಟು ಹದಗೆಟ್ಟಿತ್ತು. ಬಚ್ಚಲು ಮನೆಗೆ ಹೋಗುವುದಕ್ಕೂ ಸಹಾಯ ಬೇಕಿತ್ತು. ಬೇರೆ ಯಾರಿಗೂ ಸಹಾಯ ಮಾಡಲೂ ಬಿಡದೇ ಶಂಕರಪ್ಪನನ್ನೇ ಕರೆಯುತ್ತಿದ್ದರು. ಇದೇನು ಪ್ರೀತಿಯೋ ದ್ವೇಷವೋ ಎಂದು ಕುಸುಮಾ ಜಾನು ಆಗಾಗ ಮಾತಾಡಿಕೊಳ್ಳುತ್ತಿದ್ದರು. ಹತ್ತು ದಿನಕ್ಕೆಲ್ಲ ಊಟ ತಿಂಡಿ ಮಾಡಲಾಗದ ಸ್ಥಿತಿಗೂ ತಲುಪಿ ತೀರಿಕೊಂಡಿದ್ದರು.

* * *

ಜಾನು ಯಾವುದೋ ಮಂಪರಲ್ಲಿ ಪದ್ದಮ್ಮನ ಪಾದಗಳನ್ನು ಹಿಡಿದು ಕೂತಿದ್ದವಳು ಶಂಕರಪ್ಪನ ಅಳುವನ್ನೇ ವಿಲಕ್ಷಣವಾಗಿ ನೋಡುತ್ತಿದ್ದಳು.

'ಏನಮ್ಮಾ, ಸ್ವಲ್ಪ ಕಾಫಿ ಗೀಫಿ ಏನಾದರೂ ಹೊರಗಿಂದ ತರಿಸಬೇಕು ತಾನೆ...?' ಪದ್ದಮ್ಮನ ತಂಗಿ